absconding, ಸಿಗುತ್ತಿಲ್ಲ. ನಮಗೆ ಕೆಲವು ಮಾಹಿತಿಗಳು ಎಲ್ಲಾ ಸಿಗುತ್ತಿವೆ. ಆದರೆ investigation ನಡೆಯುತ್ತಿದೆ. ಅದೇರೀತಿ ಅಲ್ಲಿ ಯಾರು ಹಂದಿ ಮಾಂಸವನ್ನು ತಂದು ಹಾಕಿದರು ಅದರ ಬಗ್ಗೆ ಕೂಡ ತನಿಖೆ ನಡೆಯುತ್ತಿದೆ. ಆರು ಟೀಮ್ ಇದರಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ಅದರ ಬಗ್ಗೆ ಸದನಕ್ಕೆ ನಾನು ಭರವಸೆಯನ್ನು ಕೊಡುತ್ತೇನೆ, ಯಾರೇ ಮಾಡಿರಲಿ, ತಪ್ಪಿತಸ್ಥರೇ ಯಾರೇ ಇರಲಿ, provoke ಮಾಡಿದವರು, ಈ ಗುಂಪುಗಲಭೆ ನೆಪದಲ್ಲಿ ಅಮಾಯಕರ ಪ್ರಾಣ ಹೋಗಿರುವುದು ಇವೆಲ್ಲವನ್ನು books ಗೆ ತರುವಂಥ ಪ್ರಯತ್ನ ನಾವು ಖಂಡಿತವಾಗಿ ಮಾಡಿ ಅವರಿಗೆ ಶಿಕ್ಷೆಯನ್ನು ಕೊಡಿಸುವಂಥ ಕೆಲಸವನ್ನು ಮಾಡುತ್ತೇವೆ. ಇನ್ನು ಅಮಾಯಕರ ಮೇಲೆ ಕೇಸು ಇರುವುದರ ಬಗ್ಗೆ ಹೇಳುವುದಾದರೆ ಆದಷ್ಟು ಮಟ್ಟಿಗೆ ಯಾರು ಇದರಲ್ಲಿ involve ಆಗದೇ ಇದ್ದವರನ್ನು ಒಬ್ಬರನ್ನು ಹಿಡಿಯಲಿಕ್ಕೆ ಹೋಗಲಿಲ್ಲ. ವಿಡಯೋ ಕ್ಲಿಪಿಂಗ್‌ನಲ್ಲಿ ಕಲ್ಲು ಹೊಡೆಯುವುದು, ದೊಡ್ಡ ರೀತಿಯಲ್ಲಿ ಅಮಾನುಷ ಕೃತ್ಯದಲ್ಲಿ ತೊಡಗಿರುವಂಥವರ ಚಿತ್ರ ಕಂಡು ಬಂದಲ್ಲಿ ಅವರನ್ನು ಮುಖ್ಯವಾಗಿ ಹಿಡಿದಿದ್ದೇವೆ. ಒಂದು ವೇಳೆ ತನಿಖೆ ನಂತರ ಅವರ ಪಾತ್ರ ಏನು ಇಲ್ಲವೆಂದರೆ ಅವರನ್ನು ಬಿಡುಗಡೆಮಾಡಿ ಅವರ ಮೇಲೆ ಇರುವ ಕೇಸು ಬಿಡುವಂಥ ಕೆಲಸವೂ ಕೂಡ ಆಗುತ್ತದೆ ಮತ್ತು ತನ್ವೀರ್ ಸೇಠ್‌ರವರು ಆ ವ್ಯಾಪ್ತಿಯಲ್ಲಿರುವಂಥ ರೌಡಿ ಶೀಟ್‌ನಲ್ಲಿರುವಂಥವರು ಯಾರು ಇನ್ನೊಂದು ಯಾರ ಮೇಲೆ bad elements ಇದೆ ಅವರನ್ನು ಪತ್ತೆ ಹಚ್ಚುವ ಬಗ್ಗೆ ಒಂದು ಟೀಮ್ ಕೆಲಸ ಮಾಡುತ್ತಿದೆ. ತನ್ವೀರ್ ಸೇಠ್‌ರವರು 2ನೇ ತಾರೀಖಿನ ಬೆಳಗಿನಿಂದಲೇ ಫೋನಿನಲ್ಲಿ ಹಾಗೂ ಪತ್ರ ಫ್ಯಾಕ್ಸ್ ಮಾಡುವ ಮುಖೇನ ಸಂಪರ್ಕವನ್ನು ನನ್ನೊಂದಿಗೆ ಇಟ್ಟುಕೊಂಡಿದ್ದರು. ಹಿಂದಿನ ಬಾರಿಯೂ ತಾವು ಆ ರೀತಿ ಮಾಡಿದ್ದರು. ಏಪ್ರಿಲ್ ನಂತರ ಅಲ್ಲಿನ ಜಿಲ್ಲಾ ಸಚಿವರು ಏಕೆ ಶಾಂತಿಸಭೆಯನ್ನು ಮಾಡಲಿಲ್ಲವೆಂದರೆ ತಮಗೆಲ್ಲರಿಗೂ ಗೊತ್ತಿರುವಂಥೆ ಏಪ್ರಿಲ್‌ನಲ್ಲಿ ಯಾವ ಕಾಲದಲ್ಲಿ ಆ ಘಟನೆ ನಡೆಯಿತು. ನಾವೆಲ್ಲಾ ಲೋಕಸಭೆ ಚುನಾವಣೆ ಮಧ್ಯದಲ್ಲಿದ್ದೆವು. ನಮ್ಮ ಜಿಲ್ಲಾ ಸಚಿವರಾದ ನಮ್ಮ ಗ್ರಾಮೀಣ ಅಭಿವೃದ್ಧಿ ಸಚಿವರು ಅಲ್ಲಿ ಹೋದಾಗ ಅವರಿಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಬೇರ್ಯಾವುದೆ ವಿಚಾರದ ಬಗ್ಗೆ ಮಾತನಾಡಬಾರದು, ಸಭೆ ನಡೆಸಬಾರದು ಎಂದು ತಿಳಿಸಲಾಯಿತು.

8. <u>ಮುಖ್ಯಮಂತ್ರಿಗಳ ಹೇಳಿಕೆ:</u>

ವಿಷಯ: ಸರ್ವಜ್ಞನ ಪ್ರತಿಮೆಯನ್ನು ಚನ್ನೈನಲ್ಲಿ ಸ್ಥಾಪಿಸುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು): ನಾನು ಈಗ ಒಂದು statement ಮಾಡುತ್ತಿದ್ದೇನೆ.

ಸುಮಾರು 18 ವರ್ಷಗಳಿಂದ ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆಯನ್ನು ಸ್ಥಾಪಿಸುವುದರ ಬಗ್ಗೆ ಹಾಗೂ ಸರ್ವಜ್ಞನ ಪ್ರತಿಮೆಯನ್ನು ಚೆನ್ನೈನಲ್ಲಿ ಸ್ಥಾಪಿಸುವ ಬಗ್ಗೆ ನೆನೆಗುದಿಗೆ ಬಿದ್ದದ್ದ ವಿಷಯವನ್ನು ಸೌಹಾರ್ಧಯುತವಾಗಿ ಬಗೆಹರಿಸಲು ಸನ್ಮಾನ್ಯ ಮುಖ್ಯಮಂತ್ರಿಗಳು ಕ್ರಮ ಕೈಗೊಂಡಿರುತ್ತಾರೆ.

ಈಗಾಗಲೇ ಚೈನೈನ ಅಯನಾವರಂ ಪಾರ್ಕ್‌ನಲ್ಲಿ ಸರ್ವಜ್ಞನ ಪ್ರತಿಮೆಯನ್ನು ಸ್ಥಾಪಿಸಲು ಜಾಗ ಗುರುತಿಸಿದ್ದು ಅಲ್ಲಿ ಸ್ಥಾಪಿಸಬೇಕಾಗಿದೆ. ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಈ ಸ್ಥಳವು ಪ್ರತಿಮೆ ಸ್ಥಾಪಿಸಲು ಯೋಗ್ಯವಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ. ಈ ಬಗ್ಗೆ ಕನ್ನಡ ಸಂಘಟನೆಗಳು ಹಾಗೂ ಸಾಹಿತಿಗಳು ಒಲವನ್ನು ತೋರಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳು ತಮಿಳುನಾಡಿನ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅಂತಿಮವಾಗಿ ದಿನಾಂಕ 9.8.2009ರಂದು ಹಲಸೂರು ಕೆರೆಯ ಸಮೀಪ ತಿರುವಳ್ಳುವರ್ ಪ್ರತಿಮೆಯನ್ನು ಬೆಂಗಳೂರಿನಲ್ಲಿ ಅನಾವರಣಗೊಳಿಸಲು ಹಾಗೂ ಚೈನ್ನೈನ ಅಯನಾವಾರಂ ಪಾರ್ಕ್‌ನಲ್ಲಿ ಸರ್ವಜ್ಞನ ಪ್ರತಿಮೆಯನ್ನು ದಿನಾಂಕ 13.08.2009ರಂದು ಅನಾವರಣಗೊಳಿಸಲು ಪರಸ್ಪರ ಒಪ್ಪಿಗೆ ನೀಡಿರುತ್ತಾರೆ. ಬೆಂಗಳೂರಿನಲ್ಲಿ ಪ್ರತಿಮೆ ಅನಾವರಣಕ್ಕೆ ತಮಿಳುನಾಡಿನ ಮುಖ್ಯಮಂತ್ರಿಗಳು ಹಾಗೂ ತಮಿಳುನಾಡಿನಲ್ಲಿ ಪ್ರತಿಮೆ ಅನಾವರಣಕ್ಕೆ ಕರ್ನಾಟಕ ಮುಖ್ಯಂಮತ್ರಿಗಳು ಭಾಗವಹಿಸಲಿದ್ದಾರೆ. ಎರಡೂ ರಾಜ್ಯಗಳು ಆಯಾ ಭಾಷೆಯ ಜನರ ಭಾವನೆಗಳಿಗೆ ಸ್ಪಂದಿಸಿ ಸೌಹಾರ್ಧಯುತವಾಗಿ ಹಾಗೂ ಬ್ರಾತೃತ್ವ ಭಾವನೆಯಿಂದ ಎರಡೂ ಪ್ರತಿಮೆಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಸಿದ್ದರಾಮಯ್ಯ(ಮಾನ್ಯ ವಿರೋಧ ಪಕ್ಷದ ನಾಯಕರು): ಈಗ ತಮಿಳುನಾಡಿನಲ್ಲಿ ಸರ್ವಜ್ಞರ ಪ್ರತಿಮೆಯನ್ನು ಇಲ್ಲಿ ತಿರುವಳ್ಳುವರ್ ಪ್ರತಿಮೆಯನ್ನು ಸ್ಥಾಪನೆ ಮಾಡುವುದಾಗಿ ಪರಸ್ಪರ ಒಪ್ಪಂದ ಮಾಡಿಕೊಂಡು ಬಂದಿದ್ದೇವೆಂದು ಹೇಳಿದ್ದಾರೆ ಅದನ್ನು ನಾನು ಸ್ವಾಗತಿಸುತ್ತೇನೆ. ಕರ್ನಾಟಕದಲ್ಲಿರುವ ಹಿರೇಕೆರೂರಿನಲ್ಲಿ ಸರ್ವಜ್ಞರವರು ಹುಟ್ಟಿದ್ದು, ಕನ್ನಡಸಾಹಿತ್ಯದಲ್ಲಿ ಅವರ ಕ್ಷೇತ್ರ ಬಹಳ ದೊಡ್ಡದಾಗಿತ್ತು. ಸಮಾಜಕ್ಕೆ ಇವತ್ತೂ ಕೂಡ ಅವರು ನೀಡಿರುವ ತ್ರಿಪದಿಗಳಲ್ಲಿರುವ ಮೌಲ್ಯಗಳು ಬಹಳ ಪ್ರಸ್ತುತ ಸಮಾಜಕ್ಕೆ ಬಹಳ ಉಪಯುಕ್ತ. ಇಲ್ಲಿ ಹಿರೀಕೆರೂರಿನಲ್ಲಿ ಇನ್ನೂ ಅವರ ಪ್ರತಿಮೆ ಸ್ಥಾಪಿಸಿಲ್ಲ. ತಮಿಳುನಾಡಿನಲ್ಲಿ ಅವರ ಪ್ರತಿಮೆ ಸ್ಥಾಪಿಸಬೇಕೆಂದಿದ್ದಾರೆ ಮಾಡಲಿ, ಆದರೆ ಇಲ್ಲಿ ಹಿರೇಕೆರೂರು ಕ್ಷೇತ್ರವನ್ನು ಅಭಿವೃದ್ಧಿಪಡಿಸುವಂಥ ಅವರ ಪ್ರತಿಮೆಯನ್ನು ಅಲ್ಲಿ ಸ್ಥಾಪಿಸುವಂತಹ ಕೆಲಸವನ್ನು ಕೂಡ ಮಾಡಬೇಕೆಂದು ಹೇಳಿ ಸರ್ಕಾರಕ್ಕೆ ಸಲಹೆ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು): ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ನಾನು ಈಗಾಗಲೇ ಆ ಸ್ಥಳದಲ್ಲೇ ಹೋಗಿ ಅನೌನ್ಸ್

ಮಾಡಿ ಬಂದಿದ್ದೇನೆ. ಆದಷ್ಟು ಬೇಗ ಅದರ ಬಗ್ಗೆ ಕ್ರಮ ತೆಗೆದುಕೊಂಡು ನಾವು ನೀವು ಎಲ್ಲಾ ಒಟ್ಟಾಗಿ ಹೋಗಿ ಆ ಕೆಲಸವನ್ನು ಮಾಡೋಣ.

ಅಧ್ಯಕ್ಷರು: ಮಾನ್ಯ ಗೃಹಮಂತ್ರಿಗಳು ಉತ್ತರವನ್ನು ಮುಂದುವರೆಸಿ.

9. ನಿಯಮ 69ರ ಅಡಿಯಲ್ಲಿ ಮುಂದುವರೆದ ಚರ್ಚೆ.

ವಿಷಯ: ಇತ್ತೀಚೆಗೆ ಮೈಸೂರು ನಗರದಲ್ಲಿ ನಡೆದ ಕೋಮು ಗಲಭೆ ಮತ್ತೆ ಪೊಲೀಸ್ ಕಾರ್ಯಾಚರಣೆಯಿಂದಾಗಿ ಆಮಾಯಕರು ಸಾವಿಗೀಡಾಗಿರುವ ಬಗ್ಗೆ.

ಶ್ರೀ ವಿ.ಎಸ್.ಆಚಾರ್ಯ: ಮಾನ್ಯ ಅಧ್ಯಕ್ಷರೇ, ಏಪ್ರಿಲ್‌ನಲ್ಲಿ ನಡೆದಂಥ ಸಂದರ್ಭದಲ್ಲಿ ಮೈಸೂರು ಜಿಲ್ಲೆಯ ಉಸ್ತುವಾರಿ ಸಚಿವರಾದ ನಮ್ಮ ಗ್ರಮೀಣಾಭಿವೃದ್ಧಿ ಸಚಿವರು ಮೀಟಿಂಗ್ ಮಾಡಲಿಕ್ಕೆ ಬೆಂಗಳೂರಿನಿಂದ ಅಲ್ಲಿಗೆ ಹೋದಾಗ ಇಲ್ಲ ಇದು ಚುನಾವಣೆ ಕಾಲ ಇಂಥ ಸಭೆಯನ್ನು ಮಾಡಬಾರದು ಪೊಲೀಸರಿಗೆ ಈ ಬಗ್ಗೆ ನಾವು ನಿರ್ದೇಶನ ಕೊಡುತ್ತೇವೆಂದು ಹೇಳಿದ್ದರಿಂದ ಆಗ ಮೀಟಿಂಗ್ ಮಾಡಲಿಕ್ಕಾಗಲಿಲ್ಲ ವಿನ: ಬೇರೆ ಯಾವುದೇ ಉದ್ದೇಶ ಇಲ್ಲ. ಅವರಿಗೆ ಚುನಾವಣೆಯ ನಿರ್ಬಂಧವಿದ್ದ ಕಾರಣ ಆ ಸಮಯದಲ್ಲಿ ಅವರಿಗೆ ಸಭೆಯನ್ನು ಮಾಡಲಿಕ್ಕಾಗಲಿಲ್ಲ. ಇನ್ನು ಒಂದು ವಿಷಯವನ್ನು ಬಹಳ ಕಳಕಳಿಯಿಂದ ಹೇಳಬಯಸುತ್ತೇನೆ. ಕಳೆದ ಜೂನ್‌ನಲ್ಲಿ ಯಡಿಯೂರಪ್ಪನವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರದಲ್ಲಿ ನಾವು ಅಧಿಕಾರಕ್ಕೆ ಬಂದ ದಿವಸದಿಂದ ಹಾಗೂ ಅದಕ್ಕೂ ಮುಂಚಿತವಾಗಿಯೂ ಅಲ್ಪಸಂಖ್ಯಾತ ಶಾಸಕರೂ ಇದ್ದರು, ಒಬ್ಬರನ್ನು ಸಚಿವರನ್ನಾಗಿ ಮಾಡುತ್ತೇವೆಂದು ಮಾತು ಕೊಟ್ಟಂತೆ ನಾವು ನಡೆದುಕೊಂಡಿದ್ದೇವೆ. Allocation ನಲ್ಲಿ ನಾವು ಯಾವುದೇ , ರೀತಿಯ ತಾರತಮ್ಯವನ್ನು ನಾವು ಮಾಡಿಲ್ಲ. ಎಲ್ಲರಿಗೂ ಸಮಾನ ಅವಕಾಶ ಸಿಗಬೇಕೆಂಬುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ಈ ಕಳಕಳಿಯ ಬಗ್ಗೆ ಈ bonafide ಬಗ್ಗೆ ದಯವಿಟ್ಟು ಯಾರೂ ಪ್ರಶ್ನೆ ಮಾಡುವುದು ಬೇಡ, ನಾನು ಆಗಲೇ ಹೇಳಿದ ಹಾಗೆ ಈ ಪಿಡುಗು ಈಗ ಪ್ರಾರಂಭವಾದುದಲ್ಲ, ಬಹಳ ಸಮಯದಿಂದಲೇ ಇದೆ, ಆದರೆ ಈಗ ಸ್ವಲ್ಪ ಕಡಿಮೆಯಾಗಿದೆ. ನಮ್ಮೆಲ್ಲರ ಪ್ರಯತ್ನ ಆಗುತ್ತಿದೆ, ಏನಾಗಿದೆಯೆಂದರೆ ಮೈಸೂರು economy tourism potential ಮೇಲೆ ಇದೆ. ಮೈಸೂರಿನಲ್ಲಿ ಬಹುಪಾಲು ಆರ್ಥಿಕತೆ ಟೂರಿಸಂ ಇಂಡಸ್ಟ್ರಿ ಮೇಲೆ ಇದೆ. ಅದಕ್ಕೆ ಧಕ್ಕೆ ತರಬೇಕು ಮತ್ತು ಈ ಸರ್ಕಾರ ಅಭಿವೃದ್ಧಿ ಕಡೆಗೆ, ಜನಕಲ್ಯಾಣದ ಬಗ್ಗೆ ನೂರಾರು ಹೊಸ ಕಾರ್ಯಕ್ರಮಗಳು, ರೈತರನ ಬಗ್ಗೆ ಇರುವಂಥ ಕಾರ್ಯಕ್ರಮಗಳು, Social infrastructrue like Education, Health and cinatation ಇದರ ಬಗ್ಗೆ Economical infrastructure like Road, Electricity, drinking water,